### ಇಂದಿನ ಪರಿಸ್ಥಿತಿಗೆ ಕಾರಣವೇನು ?

### ಇವುಗಳಿಂದ ಪಾರಾಗಲು ಸಾಧ್ಯವೇ ?

# ಮಾನವನಿಗೆ ಭವಿಷ್ಯವಿದೆಯೇ ?



## ಮಾನವನಿಗೆ ಮರಣವೇ ಅಂತ್ಯವೇ?

ಇಂದು ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ತಾನೇ ಕೇಳಿಕೊಳ್ಳುವ ಪ್ರಶ್ನೆಗಳಿವು. ಆದರೆ ಈ ಪ್ರಶ್ನೆಗಳಿಗೆ ಉತ್ತರ ಕೊಡುವವರಾರು?

ಈ ಲೋಕವು ಒಂದು ಹರ್ಷದಾಯಕ ಸ್ಥಳವಾಗಿರಬೇಕಿತ್ತು. ಆದರೆ ಹಾಗಿಲ್ಲ, ಏಕೆ? ಏನೋ ಒಂದು ಭಯಂಕರವಾದ ತಪ್ಪಾಗಿರಬೇಕು. ಪ್ರಪಂಚದ ಅನೇಕ ಕಡೆಗಳಲ್ಲಿ ಕ್ಷಾಮ, ಹಸಿವೆ, ಪೌಷ್ಟಿಕ ಆಹಾರದ ಕೊರತೆ, ಕಾಯಿಲೆಗಳು ನಿರುದ್ಯೋಗ ಅಶಾಂತಿ, ಗಲಭೆ, ಯುದ್ಧಗಳು, ಕುಟುಂಬ ವೈಮನಸ್ಯ, ದುಷ್ಕೃತ್ಯಗಳು, ಬಾಲಾಪರಾಧಗಳು, ವಿವಾಹ ವಿಚ್ಛೇದನಗಳು, ಆತ್ಮಹತ್ಯೆ, ಕೊಲೆ, ದರೋಡೆ, ಸುಳ್ಳುಸಾಕ್ಷಿ, ಮೋಸ, ಲೈಂಗಿಕ ದುರ್ವ್ಯವಹಾರಗಳು ಇತ್ಯಾದಿ ಇತ್ಯಾದಿಗಳನ್ನು ಸ್ವತಃ ಕಣ್ಣಿಂದ ಕಾಣುವುದಲ್ಲದೆ, ಅನುಭವಿಸುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಪ್ರಪಂಚವು ಹೀಗಾಗಲು ಕಾರಣವೇನು? ದೇವರು ಪ್ರೀತಿ ಸ್ವರೂಪನೆಂದು ಎಲ್ಲಾ ಮತಗಳವರೂ ಹೇಳುತ್ತಾರೆ. ಹಾಗಿದ್ದಲ್ಲಿ ತನ್ನ ಸೃಷ್ಟಿಯಾದ ಮಾನವನಿಗೆ ಈ ರೀತಿಯಾದ ಭಯಂಕರ ಕಷ್ಟ ತೊಂದರೆಗಳನ್ನು ಏಕೆ ಬರ ಮಾಡಿದ್ದಾನೆ?

ಪ್ರಪಂಚದಲ್ಲಿನ ಮೂಲ ವಾಸ್ತವಿಕ ಸಂಗತಿಯನ್ನು ಗಮನಿಸಿದಲ್ಲಿ ಈ

ಕೆಳಗಿನ ಅಂಶಗಳು ಹೊರ ಬೀಳುತ್ತವೆ:

- ❑ ಇಂದು ಪ್ರಪಂಚದಲ್ಲಿನ ಎಲ್ಲರಿಗೂ ಸಾಕಾಗುವಷ್ಟು ಆಹಾರವಿದೆ. ಆದರೂ ಕೂಡ ಕೋಟ್ಯಾಂತರ ಜನರು ಒಂದೇ ಸಮನೆ ಹಸಿವೆಯಿಂದ ನರಳುತ್ತಿದ್ದಾರೆ.
- ❑ ಬೇಕಾದಷ್ಟು ಸಂಪತ್ತಿದೆ, ಆದರೂ ಅನೇಕ ರಾಷ್ಟ್ರಗಳು ನಿರಾಶಾದಾಯಕ ಬಡತನದಲ್ಲಿವೆ.
- ❑ ವೈದ್ಯಕೀಯ ವಿಜ್ಞಾನವು ರೋಗಗಳನ್ನು ಬಡಿದು ಜೀವಿತ ರೇಖೆಗಳನ್ನು ಹೆಚ್ಚಿಸಿವೆ. ಆದರೂ ಸಹ ಕೋಟ್ಯಾಂತರ ಜನರು ಮಾದಕ ವಸ್ತುಗಳ ಸೇವನೆಯಿಂದ ತಮ್ಮನ್ನು ಬುದ್ಧಿಹೀನರನ್ನಾಗಿ ಮಾಡಿಕೊಳ್ಳುತ್ತಾರೆ. ಅಥವಾ ತಮ್ಮ ಜೀವನವನ್ನೇ ನಾಶ ಮಾಡಿಕೊಳ್ಳುತ್ತಾರೆ.
- ❑ ಅದ್ಭುತವಾದ ಪದಾರ್ಥಗಳನ್ನು ಕಂಡು ಹಿಡಿಯಲಾಗಿದೆ ಹಾಗೂ ವ್ಯಾಪಾರವು ಅತ್ಯಧಿಕವಾಗಿ ಹೆಚ್ಚಿದೆ. ಆದರೂ ಸಹ ಲಕ್ಷಾಂತರ ಜನರು ತಮ್ಮ ಹಾಗೂ ಕುಟುಂಬಗಳ ನಿರ್ವಹಣೆಗೆ ಉದ್ಯೋಗ ದೊರಕಿಸಿಕೊಳ್ಳಲು ಅಸಾಧ್ಯವಾಗಿದೆ. (ಲಕ್ಷಾಂತರ ಜನರು ನಿರುದ್ಯೋಗಿಗಳಾಗಿದ್ದಾರೆ).
- ❑ ದೈಹಿಕ ಶ್ರಮವನ್ನು ಕಡಿಮೆಗೊಳಿಸುವ ಮತ್ತು ಗೃಹ ಬಳಕೆಯ ಸುಖಭೋಗ ವಸ್ತುಗಳು ಹೆಚ್ಚಿದಂತೆಲ್ಲಾ ಕುಟುಂಬಗಳಲ್ಲಿ ಕಲಹ, ಒಡಕು, ಮಕ್ಕಳು ತಂದೆ ತಾಯಂದಿರಿಗೆ ಅವಿಧೇಯರಾಗುವುದು,ಎದುರು ಬೀಳುವುದು, ಮನೆಬಿಟ್ಟು ಹೋಗುವುದು ಇವು ಸಾಮಾನ್ಯವಾಗಿದೆ.

ಜನರು ಹೆಚ್ಚು ಸ್ವಾತಂತ್ರ್ಯ ಪಡೆದಂತೆಲ್ಲಾ ಹೆಚ್ಚು ಹೆಚ್ಚಾಗಿ ಅನೈತಿಕತೆ ಮತ್ತು ಬೇಜವಾಬ್ದಾರಿತನಕ್ಕೆ ಗುಲಾಮರಾಗುತ್ತಿದ್ದಾರೆ. ಹೆಚ್ಚು ಹೆಚ್ಚು ಸಮೃದ್ಧಿಯಾದಂತೆಲ್ಲಾ ಸಮಾಜವು ಹೆಚ್ಚು ಮಲಿನವಾಗುತ್ತಿದೆ ಹಾಗೂ ಸ್ವಾರ್ಥಿಯಾಗುತ್ತಿದೆ.

ಶಾಂತಿ, ತೃಪ್ತಿ, ದೀರ್ಘಕಾಲ ಬಾಳುವಿಕೆ, ಎಲ್ಲರಿಗೂ ಸಮೃದ್ಧಿ -- ಇವುಗಳಿಗೆ ಬದಲಾಗಿ ಇಂದು ಪ್ರಪಂಚವು ಯುದ್ಧ, ಅತೃಪ್ತಿ ನಾಶನ ಹಾಗೂ ಅಬ್ಬರದ ಆಡಂಬರ ಮತ್ತು ಹೀನತರದ ಬಡತನ ಇವುಗಳ ಬೇಸರಿಸುವ ವೈಪರೀತ್ಯದಿಂದ ಹುಚ್ಚಾಗಿದೆ.

ಇವೆಲ್ಲಾದರ ಮೇಲೆ ಮತ್ತೊಂದು ಜಾಗತಿಕ ಯುದ್ಧ, ಪರಮಾಣು ಶಕ್ತಿಯಿಂದ ಸರ್ವನಾಶ ಮತ್ತು ಮಧ್ಯ ಪ್ರಾಚ್ಯದ **(MIDDLE EAST)** ದಳ್ಳುರಿಯಿಂದಾಗಿ ತೈಲ ಸರಬರಾಜು ನಿಂತುಹೋಗುವುದು ಇವುಗಳ ನಿರಂತರ ಬೆದರಿಕೆ ಇದೆ. ವೃತ್ತ ಪತ್ರಿಕೆಗಳು ಯುದ್ಧಗಳ, ಬಾಂಬುಗಳ, ಕೊಲೆಗಳ, ಹಿಂಸಾಚಾರದ ಹಾಗೂ ಬಿಕ್ಕಟ್ಟುಗಳ ಸುದ್ದಿಗಳನ್ನೇ ತುಂಬಿರುತ್ತವೆ. ಪ್ರಪಂಚವು ಎಷ್ಟೊಂದು ಸುಂದರವಾಗಿರಬಹುದಾಗಿತ್ತು! ಆದರೆ ಎಷ್ಟೊಂದು ಕೆಟ್ಟುಹೋಗಿ,

ಭಯಭರಿತ ಸ್ಥಳವಾಗಿದೆ!! ನಿಮಗೆ ಏನು ಬೇಕೋ ಹಾಗೂ ನಿಮ್ಮ ಕೈಲಿ ಎಷ್ಟು ಸಾಧ್ಯವೋ ಅಷ್ಟನ್ನು ಬಾಚಿಕೊಳ್ಳಿ ಎಂಬುದೇ ಇಂದಿನ ನೀತಿಯಾಗಿದೆ.

ಅದಕ್ಕೆ ಉತ್ತರವಿದೆ. ಒಂದು ಕಾರಣವಿದೆ ಮತ್ತು ಒಂದು ಪರಿಹಾರ ಬರಲಿದೆ.

## ನಿಮ್ಮ ಪ್ರತಿಕ್ರಿಯೆ ಏನು?

ಹಲವಾರುಗಳಲ್ಲಿ ಅದು ಒಂದಾಗಿರಬಹುದು. ಕೆಲವು ಜನರು ಪರಿಣಾಮವೇನೇ ಆಗಲಿ, ಎಲ್ಲಾ ನಿರ್ಬಂಧಗಳನ್ನು ತೊರೆದು ತಮಗೆ ಸಾಧ್ಯವಾದವುಗಳನ್ನೆಲ್ಲಾ ಕಸಿದುಕೊಳ್ಳುತ್ತಾರೆ. ಅದು ಬಹಳ ಕೆಟ್ಟದ್ದಾಗಿರುತ್ತದೆ. ಇತರರು ವಾಸ್ತವಿಕತೆಯಿಂದ ಪಾರಾಗಲು ಮದ್ಯ, ಮಾದಕ ವಸ್ತು, ನಿರ್ಲಕ್ಷ್ಯತೆ ಅಥವಾ ಆತ್ಮಹತ್ಯೆಗೆ ಮರೆ ಹೋಗುತ್ತಾರೆ. ಅದು **ನಿರೀಕ್ಷೆಯಿಲ್ಲದ ಅಂತ್ಯಕ್ಕೆ** ಕೊಂಡೊಯ್ಯುತ್ತದೆ. ಮತ್ತೊಂದು ಜೀವಿತದ ಅಂತ್ಯವಿದೆ -- ಅದು ಸಾಮಾನ್ಯವಾಗಿ ಸಮಾಜದಿಂದ ಪರಿತ್ಯಕ್ತನಾಗುವುದು. ಅದು ಎಲ್ಲಿಗೂ ಮುಟ್ಟಿಸುವುದಿಲ್ಲ. ಮತ್ತೆ ಕೆಲವರು ಮಂಕು ಕವಿದವರಾಗಿ, ಬೇರೆ ಯಾವುದರ ಬಗ್ಗೆ ಯೋಚಿಸುವುದಾಗಲಿ ಜವಾಬ್ದಾರಿ ತೆಗೆದುಕೊಳ್ಳುವುದಾಗಲಿ ಮಾಡದೆ, ತಮಗೆ ಮಾತ್ರ ತಕ್ಷಣಕ್ಕೆ ಏನು ಬೇಕಾಗಿದೆಯೋ ಅದಕ್ಕೆ ಮಾತ್ರ ಪ್ರಯತ್ನಿಸುವವರಾಗಿರುತ್ತಾರೆ. ಅದು ನಿರಾಶೆಯ ಜೀವನ.

ಕೆಲವರು ಗೌರವವಾದ ಮಟ್ಟವನ್ನು ಕಾಪಾಡಿಕೊಂಡು, ಸಾಧ್ಯವಾದಲ್ಲಿ ಇತರರಿಗೂ ಸಹಾಯ ಮಾಡಲು ಪ್ರಯತ್ನಿಸುವವರಾಗಿದ್ದಾರೆ.

ಇದಲ್ಲದೆ ಮತ್ತೊಂದು ಗುಂಪಿನ ಜನರಿದ್ದಾರೆ, ಅವರು ಪ್ರಪಂಚದಲ್ಲಿ ಏನು ನಡೆಯುತ್ತಿದೆ, ಏಕೆ ನಡೆಯುತ್ತಿದೆ ಮತ್ತು ಪ್ರಪಂಚವನ್ನು ಹೇಗೆ ಸರಿಪಡಿಸಲಾಗುತ್ತದೆ ಅದರಲ್ಲಿ ಮಾನವನ ಪಾತ್ರವೇನು? ಎಂಬುದನ್ನು ತಿಳಿದವರಾಗಿದ್ದಾರೆ.

ನೀವು ಯಾವ ಗುಂಪಿಗೆ ಸೇರಿದವರಾಗಿದ್ದೀರಿ? ನೀವು ಕಡೇ ಗುಂಪಿಗೆ ಸೇರಲು, ಪ್ರಪಂಚದ ಅಂತ್ಯ ಸ್ಥಿತಿಯನ್ನು ದೇವರು ಹೇಗೆ ನಿಯಂತ್ರಿಸುತ್ತಾನೆ ಹಾಗೂ ಆತನ ವಾಕ್ಯವಾದ **ಸತ್ಯವೇದ (THE BIBLE)** ಪ್ರಪಂಚದ ಹಾಗೂ ನಿಮ್ಮಂತಹ ವ್ಯಕ್ತಿಗಳ ಎಲ್ಲಾ ಸಮಸ್ಯೆಗಳಿಗೂ ಅದರಲ್ಲಿ ಉತ್ತರವಿದೆ ಎಂಬುದನ್ನು ನಿಮಗೆ ತೋರಿಸಲು ಸಹಾಯ ಮಾಡುವುದೇ ನಮ್ಮ ಉದ್ದೇಶವಾಗಿದೆ.

## ಇದು ಹಿಂದೆಯೂ ಸಂಭವಿಸಿತು

ಪ್ರಪಂಚದ ಇಂದಿನ ಪರಿಸ್ಥಿತಿಯು ಹೊಸದೇನಲ್ಲ. ಅನೇಕ ಮಹಾಚಕ್ರಾಧಿಪತ್ಯಗಳ ಅಂತ್ಯವು ಇದೇ ರೀತಿಯಾಗಿತ್ತು. ರೋಮನ್ನರಿಗೂ ಅದೇ ರೀತಿ ಸಂಭವಿಸಿತು. ಅಲೆಕ್ಸಾಂಡರನ ಮದ್ಯಪಾನದ ಮರಣವು ಗ್ರೀಕ್ ಚಕ್ರಾಧಿಪತ್ಯದ ಅವಸಾನದ ಪ್ರಾರಂಭವಾಗಿತ್ತು. ಬಾಬಿಲೋನ್ ರಾಜ್ಯವು

ಅಜಾಗರೂಕತೆಯಿಂದ ಕೂಡಿದ ಕುಡಿತ ಔತಣಗಳ ರಾತ್ರಿಯಲ್ಲಿ ಮೇದ್ಯರಿಂದ ಅಂತ್ಯಗೊಳಿಸಲ್ಪಟ್ಟಿತು.

ನಮ್ಮ ಕಾಲವು ನೋಹನ ಕಾಲದಲ್ಲಿದ್ದಂತೆ ಎಂಬುದಾಗಿ ದೇವರು ಹೇಳುತ್ತಾನೆ: "ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನೂ ಅವರು ಹೃದಯದಲ್ಲಿ ಯೋಚಿಸುವುದೆಲ್ಲವೂ ಯಾವಾಗಲೂ ಬರೀ ಕೆಟ್ಟದ್ದಾಗಿತ್ತು" (ಆದಿಕಾಂಡ.6:5). ಆಗ ದೇವರು ಮಧ್ಯೆ ಪ್ರವೇಶಿಸಿದನು. ಜಲಪ್ರಳಯವು ಬಂದು ಕೆಟ್ಟವರನ್ನೆಲ್ಲಾ ಕೊಂಡೊಯ್ಯಿತು........ ಕೇವಲ ಎಂಟು ಜನರು ಮಾತ್ರ ರಕ್ಷಿಸಲ್ಪಟ್ಟರು.

ಲೋಟನ ಕಾಲದಲ್ಲಿಯೂ ಸಹ ದೇವರು ಇದೇ ರೀತಿ ಮಾಡಿದನು. ಆಗ ಸೋದೋಮ್ ಗೋಮೋರ ಪಟ್ಟಣಗಳ ಜನರು ಇಂದಿನ ನಮ್ಮ ಪ್ರಪಂಚದಲ್ಲಿರುವಂತೆ ಅತಿಯಾದ ಅನೈತಿಕತೆ ಹಾಗೂ ಎಲ್ಲಾ ತರದ ಅಕ್ರಮಗಳಿಂದ ಕೂಡಿದ ಜೀವನವನ್ನು ನಡೆಸುತ್ತಿದ್ದರು. ದೇವರು ಅವರ ಮೇಲೆ ಬೆಂಕಿ ಗಂಧಕಗಳ ಮಳೆಯನ್ನು ಸುರಿಸಿ, ಅವರೆಲ್ಲರನ್ನೂ ನಾಶ ಪಡಿಸಿದನು. ಯೇಸು ಹೇಳಿದ್ದು: "ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯ ಕುಮಾರನ ಪ್ರತ್ಯಕ್ಷತೆಯೂ ಇರುವುದು. ಹೇಗೆಂದರೆ ಜಲಪ್ರಳಯಕ್ಕೆ ಮುಂಚಿನ ದಿವಸಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆ ಮಾಡಿಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದು, ಪ್ರಳಯದ ನೀರು ಬಂದು ಎಲ್ಲರನ್ನೂ ಬಡುಕೊಂಡು ಹೋಗುವ ತನಕ ಏನೂ ತಿಳಿಯದೆ ಇದ್ದರಲ್ಲಾ, ಅದರಂತೆ ಮನುಷ್ಯ ಕುಮಾರನು (ಯೇಸುಕ್ರಿಸ್ತನು) ಪ್ರತ್ಯಕ್ಷನಾಗುವ ಕಾಲದಲ್ಲಿಯೂ ಇರುವುದು" (ಲೂಕ.17;26-29)

ಇವೇ ನಮ್ಮ ಪೀಳಿಗೆಗೆ ಬಹು ಪ್ರಾಮುಖ್ಯವಾದ ಮಾತುಗಳಾಗಿವೆ. ಪ್ರಪಂಚದ ನಾಲ್ಕು ಮಹಾ ಚಕ್ರಾಧಿಪತ್ಯಗಳ ಅಂತ್ಯವನ್ನು ದೇವರು ಮುಂತಿಳಿಸಿದನು: ಬಾಬಿಲೋನ್, ಮೇದ್ಯ, ಪಾರಸೀಯ, ಗ್ರೀಕ್ ಮತ್ತು ರೋಮನ್ ಇದಲ್ಲದೆ ನಾವು ಜೀವಿಸಿರುವ ಈ ಕಾಲದ ಅಂತ್ಯವನ್ನೂ ಸಹ ದೇವರು ಮುಂತಿಳಿಸಿದ್ದಾನೆ: "ಆ ರಾಜರ ಕಾಲದಲ್ಲಿ (ಇಂದಿನ ಕಾಲದಲ್ಲಿ) ಪರಲೋಕದ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು, ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿ ಹೋಗದು. ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ, ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವುದು" (ದಾನಿಯೇಲ.2:44).

ದೇವರು ಕೇವಲ ಒಂದು ಅಂತ್ಯವನ್ನು ಮಾತ್ರ ಏರ್ಪಡಿಸದೆ, ಒಂದು ಹೊಸ ಪ್ರಾರಂಭವನ್ನು ಏರ್ಪಡಿಸಿರುತ್ತಾನೆಂದು ಇದು ತಿಳಿಸುತ್ತದೆ. ಈ ಹೊಸ ಪ್ರಾರಂಭದಲ್ಲಿ ಪ್ರಪಂಚದಲ್ಲಿರುವ ಎಲ್ಲಾ ಒಳ್ಳೆಯ ಮೂಲ ಸಂಪತ್ತುಗಳನ್ನು ಉಪಯೋಗಿಸಿ, ಜನರು ಅನುಭವಿಸುವಂತೆ ಮಾಡುತ್ತಾನೆ. ಈ ಪ್ರಪಂಚವು

ಒಂದು ಸಂತೋಷದ ಸ್ಥಳವಾಗಲು ಸಾಧ್ಯವಾಗುವುದಲ್ಲದೆ ಒಂದು ಸಂತೋಷದ ಸ್ಥಳವೇ ಆಗುತ್ತದೆ. ಇದೇ **ಶುಭ ಸಮಾಚಾರವಾಗಿದೆ.**

ಯೇಸು ಕ್ರಿಸ್ತನು ಹಿಂದಿರುಗಿದಾಗ ಆತನ ಆಳ್ವಿಕೆಯಲ್ಲಿ ಈ ಲೋಕವು ಒಂದು ಹರ್ಷದಾಯಕ ಸ್ಥಳವಾಗಿ ಮಾರ್ಪಡುತ್ತದೆ.

## ಏಕೆ ಈ ಸಂಕಟ ಹಾಗೂ ಕಷ್ಟಗಳು?

ಕ್ಷಾಮ, ಯುದ್ಧ, ಹಿಂಸಾಚಾರ, ದುಷ್ಕೃತ್ಯಗಳು — ವೈಯುಕ್ತಿಕ ಹಾಗೂ ರಾಷ್ಟ್ರೀಯ ಘಟನೆಗಳ -- ಅನೇಕರಿಗೆ ದೇವರಿದ್ದಾನೆಯೇ ಎಂದು ಪ್ರಶ್ನಿಸಲು ಕಾರಣವಾಗಬಹುದು, ದೇವರು ಸರ್ವಶಕ್ತನಾಗಿದ್ದಲ್ಲಿ ಈ ದುರ್ಘಟನೆಗಳು ಸಂಭವಿಸಲು ಏಕೆ ಬಿಡುತ್ತಾನೆ? ಮಾನವರು ದೇವದೂಷಣೆ ಮಾಡಿದಾಗ್ಯೂ ದೇವರ ನಿಯಮಗಳಿಗೆ ವಿಧೇಯರಾಗದಿದ್ದರೂ ಸಹ, ದೇವರು ಈ ಸಂಕಷ್ಟಗಳಿಂದ ತಮ್ಮನ್ನು ಪಾರು ಮಾಡಬೇಕೆಂದು ಅಪೇಕ್ಷಿಸುತ್ತಾರೆ. ಈ ಕಷ್ಟಗಳನ್ನು ತಮ್ಮ ಮೇಲೆ ತಾವೇ ಬರಮಾಡಿಕೊಳ್ಳುತ್ತಾರೆಂದೂ, ದೇವರಿಂದ ದೂರ ಹೋಗುವುದರಿಂದ ತಮ್ಮ ಸಂಕಷ್ಟಗಳ ಹಾಗೂ ದುರಂತಗಳ ಸಂದರ್ಭಗಳಲ್ಲಿ ದೇವರ ಸಹಾಯವನ್ನು ಅವರು ನಿರಾಕರಿಸುತ್ತಾರೆಂಬುದನ್ನು ಮಾನವರು ಅರಿಯಲು ಸಾಧ್ಯವಾಗಿಲ್ಲ. ಅವರು ಸ್ವಾತಂತ್ರ್ಯಕ್ಕೆ ತಮ್ಮ ಹಕ್ಕನ್ನು ಸಾಧಿಸುತ್ತಾರೆ. ಅಥವಾ ತಮ್ಮ ಕಾರ್ಯಗಳಿಗೆ ಅನುಮತಿಗಳನ್ನು ಕೇಳುತ್ತಾರೆ. ಅದೇ ಸಮಯದಲ್ಲಿ ತಮ್ಮದೇ ತಪ್ಪುಗಳಿಂದಾದ ಪರಿಣಾಮಗಳಿಂದ ತಮ್ಮನ್ನು ರಕ್ಷಿಸಲು ದೇವರನ್ನು ನಿರೀಕ್ಷಿಸುತ್ತಾರೆ.

ಇವೆಲ್ಲಕ್ಕೂ ಮಿಗಿಲಾಗಿ ಅವರು ದೇವರ ಉದ್ದೇಶವನ್ನು ಅರಿಯಲು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಈ ಲೋಕದ ಬಗ್ಗೆ ದೇವರು ಒಂದು ಉದ್ದೇಶವನ್ನು ಹೊಂದಿದ್ದಾನೆ. ಅಂತ್ಯದಲ್ಲಿ ಎಲ್ಲಾ ರೀತಿಯಲ್ಲಿಯೂ ತನ್ನ ಮಹಿಮೆಯನ್ನೂ ತನ್ನ ಪುತ್ರನಾದ ಯೇಸು ಕ್ರಿಸ್ತನನ್ನು ಕಳುಹಿಸುತ್ತಾನೆಂದೂ ಅವರು ಅರಿಯಲು ಅಥವಾ ಅಂಗೀಕರಿಸಲು ವಿಫಲರಾಗಿದ್ದಾರೆ.

## ಈಗ ನಿಮಗೊಂದು ಎಚ್ಚರಿಕೆಯ ಮಾತು

ಪರಿಸ್ಥಿತಿಯು ಉತ್ತಮಗೊಳ್ಳುವ ಮೊದಲೇ ಹದಗೆಡುತ್ತದೆಂದು ಸತ್ಯವೇದವು **(THE BIBLE)** ತಿಳಿಸುತ್ತದೆ. ಪ್ರಪಂಚದ ಬಹುತೇಕ ನಾಯಕರು ತಮ್ಮ ಅಧಿಕಾರವನ್ನು ಯೇಸು ಕ್ರಿಸ್ತನಿಗೆ ತಾವಾಗಿಯೇ ಬಿಟ್ಟುಕೊಡುವುದಿಲ್ಲ. ಮಧ್ಯಪ್ರಾಚ್ಯವು **(MIDDLE EAST)** ಯಾವಾಗಲೂ ಕೋಪಿನ ಸ್ಥಳವಾಗಿದ್ದು, ಇನ್ನೂ ಹೆಚ್ಚು ಕಾವು ಏರುವ ಸಾಧ್ಯತೆ ಇದೆ. ಇಸ್ರಾಯೇಲನ್ನು ಇಲ್ಲದಂತೆ ಮಾಡಲು ಅನೇಕ ಪ್ರಯತ್ನಗಳು ನಡೆಯಲಿವೆ; ಯೆರೂಸಲೇಮಿನ ಮೇಲೆ ಮತೀಯ ಹಕ್ಕುಗಳು ಸಾಧಿಸಲ್ಪಡುತ್ತವೆ; ಅನೇಕ ರಾಷ್ಟ್ರಗಳು ಕಮ್ಯೂನಿಸ್ಟ್ ರಾಷ್ಟ್ರಗಳಾಗುತ್ತವೆ. ಈ ಎಲ್ಲಾ ಘಟನೆಗಳು ವಿಷಯ ತಿಳಿಯದ ಅನೇಕರಿಗೆ ಗೊಂದಲವನ್ನುಂಟುಮಾಡುತ್ತವೆ. ಹಾಗೂ ಅಧೈರ್ಯ ಹುಟ್ಟಿಸುವಂತ

-ವುಗಳಾಗಿವೆ.

ಮುಂದಾಗಿ ಎಚ್ಚರಿಕೆ ಹೊಂದುವುದು ಮುಂದಾಗಿ ಸಿದ್ಧತೆ ಮಾಡಿಕೊಂಡಂತೆ ನೀವು ವಾಸ್ತವಿಕ ಸಂಗತಿಗಳನ್ನು ನೇರವಾಗಿ ಪಡೆಯಬೇಕು. ನಿಮ್ಮ ನಂಬಿಕೆಯು ಸ್ಪಷ್ಟವಾಗಿರಬೇಕು. ನಿಮ್ಮ ವಿಶ್ವಾಸವು ದೃಢವಾಗಬೇಕು. ಒಮ್ಮೆ ಇದನ್ನು ಕಾರ್ಯಗತಗೊಳಿಸಿದಲ್ಲಿ ನೀವು ಸತ್ಯವನ್ನು ನಂಬುತ್ತೀರಿ ಮತ್ತು ಬಲವಾದ ಭ್ರಮೆಗೆ ಒಳಗಾಗುವುದಿಲ್ಲ. ನಿಮ್ಮ ಹಾಗೂ ಈ ಲೋಕದ ಮುಂದಣ ಭ್ರಮೆಗೆ ಒಳಗಾಗುವುದಿಲ್ಲ. ನಿಮ್ಮ ಹಾಗೂ ಈ ಲೋಕದ ಮುಂದಣ ಭವಿಷ್ಯವನ್ನು ಸ್ಪಷ್ಟವಾಗಿ ತಿಳಿಯಬೇಕೆನಿಸಿದಲ್ಲಿ, ನೀವು ದೇವರ ವಾಕ್ಯವಾದ ಸತ್ಯವೇದವನ್ನು **(THE BIBLE)** ಓದಬೇಕು.

ವಾಸ್ತವಿಕ ಸಂಗತಿಗಳನ್ನು ನೇರವಾಗಿ ಅರಿಯಲು ನೀವೇ ಸತ್ಯವೇದವನ್ನು **(THE BIBLE)** ಓದಲು ಪ್ರಾರಂಭಿಸಿ. ಇದನ್ನು ಹೇಗೆ ಓದಬೇಕು ಎಂಬುದರ ಬಗ್ಗೆ ನಮಗೆ ಬರೆದಲ್ಲಿ, ನಾವು ನಿಮಗೆ ದೈನಂದಿನ ಪಠಣ ತಃಖ್ತೆಯನ್ನೂ ಇನ್ನಿತರ ಸಹಾಯಕ ಪುಸ್ತಕವನ್ನೂ ಉಚಿತವಾಗಿ ಕಳುಹಿಸುತ್ತೇವೆ.

ನಮ್ಮಲ್ಲಿ ಕನ್ನಡ, ಇಂಗ್ಲೀಷ್ ಭಾಷೆಗಳಲ್ಲಿ ಸತ್ಯವೇದ ಪಾಠಗಳನ್ನು ಚಿಕ್ಕವರಿಗೂ (ಭಾನುವಾರ ಶಾಲೆ) ವಯಸ್ಕರಿಗೂ ಅಂಚೆ ಮೂಲಕ ಉಚಿತವಾಗಿ ಕಳುಹಿಸುತ್ತೇವೆ. ಇಂದೇ ಬರೆಯಿರಿ

– ಭಾ. ಚಂದುದಾಸ್

ಒಂದು ಅಂಚೆ ಕಾರ್ಡಿನಲ್ಲಿ ನಿಮ್ಮ ಹೆಸರು ಪೂರ್ಣ ವಿಳಾಸವನ್ನು ಬರೆದು ಕಳುಹಿಸಿದಲ್ಲಿ, ನಾವು ನಿಮಗೆ ಉಚಿತವಾಗಿ ಸಲಹೆ ಹಾಗೂ ಅಂಚೆ ಶಿಕ್ಷಣವನ್ನು ಕೊಡುತ್ತೇವೆ. ವೈಯುಕ್ತಿಕವಾಗಿ ಭೇಟಿ ಮಾಡಲಿಚ್ಛಿಸುವವರು ಈ ಕೆಳಕಂಡ ವಿಳಾಸಕ್ಕೆ ಮುಂಚಿತವಾಗಿ ಬರೆದಲ್ಲಿ, ಭೇಟಿಯನ್ನೂ ಗೊತ್ತುಪಡಿಸಲಾಗುವುದು.

**ಭೂಲೋಕದಲ್ಲಿ ಆಳ್ವಿಕೆ ನಡೆಸಲು**
**ಯೇಸುಕ್ರಿಸ್ತನು ಶೀಘ್ರವೇ ಹಿಂದಿರುಗುತ್ತಾನೆ.**

**1997**

**ದಿ ಕ್ರಿಸ್ಟಡೆಲ್ಫಿಯನ್ ಪ್ರೀಚಿಂಗ್ ಕಮಿಟಿ – ಇಂಡಿಯ**
ಕರ್ನಾಟಕ ವಲಯ ಸಮಿತಿ,
ಅಂಚೆ ಪೆಟ್ಟಿಗೆ 4237, ಬೆಂಗಳೂರು – 560 042